ಎನ್ನತಕ್ಕ ಮಾತನ್ನು ಹೇಳಿದ್ದೇವೆ. ತಾವೂ ಕೂಡ ಸದಸ್ಯರಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ ಗಮನಕೊಡಬೇಕು, ತಮ್ಮ ಲೋಕಸಭಾ ಸದಸ್ಯರೇ ಹೇಳಿದ್ದಾರೆ, ಬಹಳ ಒಳ್ಳೆಯ ಕೆಲಸವಾಗಿದೆಯೆಂದು ಮುಖ್ಯಮಂತ್ರಿಗಳ ಎದುರುಗಡೆಯೇ ಹೇಳಿದ್ದಾರೆ, ಅಲ್ಲಿ 84 ಪರ್‌ಸೆಂಟ್ ಕೆಲಸವಾಗಿದೆ, ಅದರ ಬಗ್ಗೆ ಹೇಳಿದ್ದೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 22-7-2002ರ ಲಿಖಿತ ಮೂಲಕ ಉತ್ತರಿಸುವ 168 ಪ್ರಶ್ನೆಗಳ ಪೈಕಿ 163 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಅನುಬಂಧ – I ಮಂಡಿಸಲಾಗಿದೆ.

3. ಅಧ್ಯಕ್ಷರ ಟಿಪ್ಪಣಿ ಮೇರೆಗೆ

(ಅ) ವಿಧಾನಸಭೆಯ ಮೊಗಸಾಲೆಯಲ್ಲಿ ಮಾಜಿ ಸಚಿವ ಶ್ರೀ ಕಾಶಪ್ಪನವರಿಗೆ ನಗರಾಭಿವೃದ್ಧಿ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ರವರು ಬೆದರಿಕೆ ಹಾಕಿದ್ದಾರೆನ್ನಲಾದ ವಿಷಯದ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶ್ರೀ ಕಾಶಪ್ಪನವರ್

ಅಧ್ಯಕ್ಷರು : ತಾವೇನು ಪ್ರಸ್ತಾಪ ಮಾಡಲು ಬಯಸುತ್ತಿದ್ದೀರಿ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆಯೇ ಹೇಳಿದ್ದಾರಲ್ಲಾ, ಮತ್ತೆ ಅದನ್ನು ಪ್ರಸ್ತಾಪ ಮಾಡುವ ಅಗತ್ಯ ಇದೆಯೇ? ಎಲ್ಲರಿಗೂ ರಕ್ಷಣೆ ಕೊಡುವುದು ನಮ್ಮ ಆದ್ಯಕರ್ತವ್ಯವೆಂದು ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆಯೇ ಹೇಳಿದ್ದಾರೆ, ಮತ್ತು ಪ್ರಸ್ತಾಪ ಮಾಡುವ ವಿಚಾರವೇನಿದೆ?

ಶ್ರೀ ಜಗದೀಶ್ ಶೆಟ್ಟರ್ : ನಾನು ಇನ್ನೂ ಅದರ ಬಗ್ಗೆ ಸಬ್‌ಮಿಷನ್‌ನನ್ನೇ ಮಾಡಿಲ್ಲ, ಆಗಲೇ.. ತಾವು

ಶ್ರೀ ಎ.ಎಸ್. ನಾಡಗೌಡ ಅಪ್ಪಾಜಿ (ಮುಖ್ಯ ಸಚೇತಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಶಪ್ಪನವರು ಮಾಡಿದಂಥ ಪತ್ರಿಕಾ ವರದಿ ಮತ್ತು ದೂರದರ್ಶನದಿಂದ ನಾನು ಮಾರೆತಿಯನ್ನು ತಿಳಿದುಕೊಂಡೆ. ನಮ್ಮ ಹೆರಸನ್ನು ಅದರಲ್ಲಿ ಡ್ರಾಗ್ ಮಾಡಿದ್ದಾರೆ. ಮತ್ತೊಬ್ಬರದನ್ನೂ ಮೆನ್‌ಷನ್ ಮಾಡಿದ್ದಾರೆ. ವಾಸ್ತವಿಕವಾಗಿ ಆ ರೀತಿಯಾದ ಯಾವುದೇ ಘಟನೆ ನಡೆದಿಲ್ಲ. ಆ ರೀತಿ ನಡೆಯಲಾರದಂಥ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿ ಸದನದ ಸಮಯವನ್ನು ಹಾಳು ಮಾಡತಕ್ಕದ್ದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ನಾವು ವಿಷಯವನ್ನೇ ಪ್ರಸ್ತಾಪ ಮಾಡಬಾರದೇ?

ಅಧ್ಯಕ್ಷರು : ಪ್ರಸ್ತಾಪ ಮಾಡಬಾರದೆಂದು ನಾನು ಹೇಳುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇನ್ನೂ ನಾನು ವಿಷಯದ ಪ್ರಸ್ತಾಪವನ್ನೇ ಮಾಡಿಲ್ಲ, ನನಗೆ ಇದು ಅರ್ಥವಾಗುತ್ತಿಲ್ಲ.

ಶ್ರೀ ಎ.ಎಸ್. ನಾಡಗೌಡ ಅಪ್ಪಾಜಿ : ಆಗಲಾರದ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿ ಏಕೆ ಸದನದ ಸಮಯವನ್ನು ಹಾಳು ಮಾಡುತ್ತೀರಿ. ಕೇವಲ ಷುಲ್ಲಕ ವಿಚಾರಕ್ಕಾಗಿ ಸದನದ ಸಮಯವನ್ನು ಹಾಳು ಮಾಡುವುದು ಸರಿಯಲ್ಲ.